# *Form No.4.*
# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 185/2024**
**PW 2**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಶ್ರೀಕಾಂತ್ ಜಿ. |
| ತಂದೆ ಹೆಸರು | : | ಡಾ. ಸುಬ್ರಹ್ಮಣ್ಯ |
| ಪ್ರಾಯ | : | 44 ವರ್ಷ |
| ಉದ್ಯೋಗ | : | ವೈದ್ಯರು , ಕೆಎಂಸಿ ಮಣಿಪಾಲ |
| ವಾಸ | : | ಮಣಿಪಾಲ |

ದಿನಾಂಕ : **23.12.2025** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ ಕೆ.ಎಸ್. ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದ ಸಮನ್ಸ ಮೇರೆಗೆ ಈ ಕೇಸಿನಲ್ಲಿ ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಅರ್ಜಿದಾರರಿಗೆ ನಾನು ಮುಖಕ್ಕೆ ಆದಂತಹ ಗಾಯಗಳಿಗೆ ಚಿಕಿತ್ಸೆಯನ್ನು ನೀಡಿದ್ದೇನೆ. ಅವರನ್ನು ಪರೀಕ್ಷಿಸಿ, ನಾನು ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನೀಡಿದ್ದು, ನಾನು ನೀಡಿದ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ - 17 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ - 17(ಎ) ಎಂದು ಗುರುತಿಸಲಾಯಿತು.

ಅರ್ಜಿದಾರರಿಗೆ ಮುಖದಲ್ಲಿ ಸುಮಾರು 3 ಪ್ಲೇಟ್ ಗಳು ಮತ್ತು 9 ಸ್ಕ್ರೂಗಳು ಇದ್ದು, ಅದನ್ನು ತೆಗೆಯಲು ಸುಮಾರು ಒಂದೂವರೆ ಲಕ್ಷ ಖರ್ಚಾಗುತ್ತದೆ ಎಂದು ತಿಳಿಸಿದ್ದೇನೆ. ನಿಪಿ - 16 ನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಅರ್ಜಿದಾರರಿಗೆ ನೀಡಿರುವ ಚಿಕಿತ್ಸೆಯ ಬಗ್ಗೆ ನಮೂದಿಸಿದ್ದೇನೆ.

<u>ಪಾಟೀ ಸವಾಲುಃ</u> ಶ್ರೀಮತಿ ಎನ್.ಬಿ.ಎಸ್. 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವಾದ ತಕ್ಷಣ ಅರ್ಜಿದಾರರು ನೇರವಾಗಿ ನನ್ನ ಬಳಿ ಬಂದಿರುವುದಿಲ್ಲ. ಮೊದಲು ಟ್ರಾಮಾ ಸೆಂಟರ್ ಗೆ ಬಂದಿದ್ದು, ನಂತರ ನಾವು ಪರೀಕ್ಷಿಸಿದ್ದೇವೆ. ಅರ್ಜಿದಾರರು ದಿಃ 04.07.2023 ರಲ್ಲಿ ಟ್ರಾಮಾ ಸೆಂಟರ್ ಗೆ ಬಂದಿದ್ದು, ಅದೇ ದಿನ ಸಂಜೆ ಅವರನ್ನು ಪರೀಕ್ಷಿಸಿ ಒಳರೋಗಿಯಾಗಿ ದಾಖಲಿಸಿದ್ದೇವೆ. ನಿಪಿ - 16 ರಲ್ಲಿ ಕಂಡು ಬರುವ ಸಹಿ ನನ್ನ ಪರವಾಗಿ ಪ.ಜಿ. ಆದಂತಹ ಡಾ. ವಂಶಿಕಾ ರವರು ಮಾಡಿರುತ್ತಾರೆ. ನಿಪಿ - 16 ರಲ್ಲಿ ನನ್ನ ಹೆಸರಿನಲ್ಲಿರುವ ಸೀಲನ್ನು ಬಿಟ್ಟು ನನ್ನ ಸಹಿ ಇರುವುದಿಲ್ಲ. ಆದರೆ ಕೆ.ಎಂ.ಸಿ.ಯಿಂದ ನೀಡಲಾಗಿದೆ. ನಿಪಿ - 16 ರಲ್ಲಿ ನನ್ನ ಸಹಿ ಇರದ ಕಾರಣ, ನಿಪಿ - 16 ನ್ನು ನಾನು ನೀಡಿರುವುದಿಲ್ಲ ಮತ್ತು ಅರ್ಜಿದಾರರನ್ನು ನಾನು

ಯಾವಾಗಲೂ ಪರೀಕ್ಷಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಯಾವಾಗಲೂ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಅಂಗನ್ಯೂನ್ಯತೆ ಪರೀಕ್ಷಿಸುವ ಪೂರ್ವದಲ್ಲಿ ಯಾವ ಯಾವ ಅಂಗನ್ಯೂನ್ಯತೆ ಇದೆ ಎಂದು ನಾನು ಪರೀಕ್ಷೆ ಮಾಡಿರುವ ಬಗ್ಗೆ ವರ್ಕ್ ಶೀಟ್ ಈಗ ನನ್ನ ಬಳಿ ಇರುವುದಿಲ್ಲ. ಅರ್ಜಿದಾರರಿಗೆ ಊಟ ಜಗಿಯಲು ತೊಂದರೆಯಾಗುತ್ತದೆ. ಅರ್ಜಿದಾರರನ್ನು ಅಪಘಾತಕ್ಕೆ ಪೂರ್ವದಲ್ಲಿ ನನಗೆ ಪರಿಚಯ ಇರುವುದಿಲ್ಲ. ಅರ್ಜಿದಾರರು ಯಾವುದೇ ಕೆಲಸಗಳನ್ನು ಮಾಡಬಾರದು ಎಂದು ನಾನು ತಿಳಿಸಿರುವುದಿಲ್ಲ. ಡಿಸ್ ಚಾರ್ಜ್ ಸಮ್ಮರಿಯನ್ನು ನಾನು ನೀಡದ ಕಾರಣ, ಅರ್ಜಿದಾರರಿಗೆ ಮುಂದುವರಿದ ಚಿಕಿತ್ಸೆಗೆ ಒಂದೂವರೆ ಲಕ್ಷ ರೂಗಳ ಅವಶ್ಯಕತೆ ಇದೆ ಎಂದು ನಾನು ಹೇಳಲು ಅರ್ಹ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರೀಕ್ಷೆಯನ್ನು ಮಾಡದೇ, ಯಾವುದೇ ಚಿಕಿತ್ಸೆಯನ್ನು ನೀಡದೆ, ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚು ಅಂಗನ್ಯೂನ್ಯತೆಯನ್ನು ಸೂಚಿಸಿ, ಸುಳ್ಳು ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.